ಸಂಪಾದಕೀಯ

# ಸತ್ಯನಿಷ್ಠೆ ಮತ್ತು ಪ್ರಾಮಾಣಿಕತೆ



**ಕ**ಳೆದ ಸಂಚಿಕೆಯಲ್ಲಿ ನಾವು ಕೆಲವು ಪ್ರಮುಖವಾದ ಆಧ್ಯಾತ್ಮಿಕ ಗುಣಗಳ ಬಗ್ಗೆ ಚಿಂತನೆ ನಡೆಸಿದ್ದೇವೆ. ಆ ಗುಣಗಳಲ್ಲಿ ಸತ್ಯನಿಷ್ಠೆ ಅಥವಾ ಸತ್ಯಸಂಧತೆ ಅತ್ಯಂತ ಮುಖ್ಯವೂ ಸಾರ್ವತ್ರಿಕವೂ ಆದುದೆಂಬುದನ್ನು ಗಮನಿಸಿದ್ದೇವೆ. ಈ ವಿಷಯವನ್ನು ಕುರಿತು ಇನ್ನಷ್ಟು ಆಳವಾಗಿ ಚಿಂತಿಸಿ ವಿಶದೀಕರಿಸಿಕೊಳ್ಳುವುದು ಆಧ್ಯಾತ್ಮಿಕ ಸಾಧನೆಯ ದೃಷ್ಟಿಯಿಂದ ಹೆಚ್ಚು ಉಪಯುಕ್ತವಾಗಬಹುದು.

## ಸತ್ಯ ಎಂದರೇನು?

'ಸತ್ಯ' ಎಂದರೆ ಸುಳ್ಳು ಹೇಳದಿರುವುದು, ನಿಜವಾಗಿ ನಡೆದದ್ದು ಅಥವಾ ನಿಜವಾಗಿ ಇರುವುದು ಎಂದು ಸಾಮಾನ್ಯವಾಗಿ ಎಲ್ಲರೂ ತಿಳಿದುಕೊಳ್ಳುತ್ತಾರೆ. ಹೀಗೆ ಅರ್ಥಮಾಡಿಕೊಳ್ಳುವುದರಲ್ಲಿ ಏನೂ ತಪ್ಪಿಲ್ಲ ; ಏಕೆಂದರೆ ಈ ರೀತಿ ಸರಳವಾಗಿ ಹೇಳುವ ಅರ್ಥ 'ಸುಳ್ಳಲ್ಲದ್ದು' ಎಂಬಂತೆ, ನಕಾರಾತ್ಮಕ ಭಾವವನ್ನು ಅವಲಂಬಿಸಿದೆ. ಆದರೆ 'ಸತ್ಯ' ಎಂಬುದು ಬೇರೆ ಯಾವುದನ್ನೂ ಅವಲಂಬಿಸದ, ತನ್ನ ನೆಲೆಯಲ್ಲೇ ತಾನು ಸ್ವತಂತ್ರವಾಗಿ ನಿಂತಿರುವ ಒಂದು ತತ್ತ್ವ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಹೀಗೆ ನೋಡುವಾಗ, ಇದು ಎಷ್ಟು ಸರಳವೋ ಅಷ್ಟೇ ಸೂಕ್ಷ್ಮವೂ ಗಹನವೂ ಆದ ತತ್ತ್ವ ಎಂಬುದು ನಮಗೆ ಮನವರಿಕೆಯಾದೀತು.

'ಸತ್' ಎಂಬ ಪದದ ಅರ್ಥ 'ಇರುವಿಕೆ'. ಇದನ್ನು ಅವಲಂಬಿಸಿರುವುದೇ 'ಸತ್ಯ'. ಇರುವಿಕೆ ಎಂದರೆ ಅಸ್ತಿತ್ವ; 'ಇಲ್ಲದ್ದು' ಎಂಬುದನ್ನು ಅವಲಂಬಿಸದೆ, ಸ್ವತಂತ್ರವಾಗಿ, ತನಗೆ ತಾನೇ ಇರುವ ಅಸ್ತಿತ್ವ. ಹೀಗೆಂದರೇನು? ಒಂದು ಉದಾಹರಣೆಯೊಂದಿಗೆ ಇದನ್ನು ತಿಳಿಯಲು ಯತ್ನಿಸೋಣ: ಸತ್ಯ ಎಂದರೆ ಬೆಳಕಿನ ಹಾಗೆ. ಬೆಳಕು ಎಂದರೇನು? ಕತ್ತಲೆ ಇಲ್ಲದ ಸ್ಥಿತಿಯೇ ಬೆಳಕು. ಇಲ್ಲಿ 'ಇರುವುದು' ಬೆಳಕೇ, ಅಥವಾ ಕತ್ತಲೆಯೆ? ಬೆಳಕು ಎಂಬುದು 'ಕತ್ತಲೆ ಇಲ್ಲದ ಸ್ಥಿತಿ' ಎಂದಾಗ, ಕತ್ತಲೆಯನ್ನು ಅವಲಂಬಿಸಿದೆಯೆ? ಇಲ್ಲ; ಬೆಳಕು ತಾನೇತಾನಾಗಿ ಇದೆ. ಅದು ಇರುವಾಗ ಕತ್ತಲೆ ಇಲ್ಲದಾಗುವುದು; ಅಂದರೆ ಕತ್ತಲೆ ಬೆಳಕನ್ನು ಅವಲಂಬಿಸಿದೆ. 'ಬೆಳಕು ಇಲ್ಲದಾಗ ಕತ್ತಲು' ಇದೆ ಎನ್ನಬಹುದು — ಅಂದರೆ ಕತ್ತಲೆಗೆ ಸ್ವತಂತ್ರ ಅಸ್ತಿತ್ವವಿಲ್ಲ ಎಂದಂತಾಯಿತು. ಇದೇ ರೀತಿ, 'ಸತ್ಯ' ಅಥವಾ ಅಸ್ತಿತ್ವ ಎಂಬುದು ಇಲ್ಲದ ಸ್ಥಿತಿಯನ್ನೇ 'ಇಲ್ಲದ್ದು', 'ಅಭಾವ', 'ಮಿಥ್ಯೆ' ಎಂದೆಲ್ಲ ಹೇಳಬಹುದು; ಅದು ಸತ್ಯವನ್ನೇ ಅವಲಂಬಿಸಿರುವ ಒಂದು ಸ್ಥಿತಿ ಎನ್ನಬಹುದು; ಅದು ತನಗೆ ತಾನೇ ಅಸ್ತಿತ್ವ ಹೊಂದಿಲ್ಲ. ಈ ಅರ್ಥದಲ್ಲಿ ಎಲ್ಲ ವಸ್ತುವಿನ, ಎಲ್ಲ ವಿಷಯಗಳ, ಎಲ್ಲ ತತ್ತ್ವಗಳ ಅಸ್ತಿತ್ವ ಇದೊಂದೇ 'ಸತ್ಯ' ಅಥವಾ 'ಇರುವಿಕೆ'; ಅದು ಇದ್ದದ್ದರಿಂದಲೇ ಎಲ್ಲ ವಸ್ತು-ವಿಷಯಗಳಿಗೆ ಅಸ್ತಿತ್ವ ದೊರಕಿದೆ. ವೇದ, ಉಪನಿಷತ್ತುಗಳು ಈ 'ಇರುವಿಕೆ' ಅಥವಾ 'ಸತ್' ಅನ್ನೇ ಎಲ್ಲವಕ್ಕೂ ಮೂಲವೆನ್ನುತ್ತದೆ; ಅದನ್ನೇ ಆತ್ಮ, ಬ್ರಹ್ಮ ಎಂದೂ ಕರೆಯುತ್ತದೆ. ಅದು ಇದ್ದದ್ದರಿಂದಲೇ ಎಲ್ಲೆಲ್ಲೂ 'ಇದೆ' ಎಂಬುದು ಸಾಧ್ಯವಾಗಿದೆ. ಇದು ಆತ್ಮನ, ಬ್ರಹ್ಮನ ಅಥವಾ ಭಗವಂತನ ಮೂಲ ಸ್ವಭಾವವೇ ಆಗಿದೆ. ಆದ್ದರಿಂದ ಇದೊಂದು ಗುಣವಲ್ಲ; ಈ ತತ್ತ್ವವು ಸಾಕ್ಷಾತ್ ಬ್ರಹ್ಮವೇ ಆಗಿದೆ.

## ಸತ್ಯ, ಸತ್ಯವಚನ ಮತ್ತು ಸತ್ಯನಿಷ್ಠೆ

'ಸತ್ಯ' ಎಂಬ ಪದವನ್ನು ಹಲವು ಸಂದರ್ಭಗಳಲ್ಲಿ ನಾವು ಬಳಸುತ್ತೇವೆ. ದೈನಂದಿನ ವ್ಯವಹಾರದಲ್ಲಿ 'ಅವನು ಸತ್ಯ ನುಡಿಯುತ್ತಿದ್ದಾನೆ', 'ನೀನು ತಿಳಿದಂತೆ ಅದು ಸತ್ಯವಲ್ಲ' — ಹೀಗೆಲ್ಲ ಹೇಳುವಾಗ ನಾವು ಸೂಚಿಸುವುದೇನನ್ನು? 'ಇರುವಿಕೆ' ಅಥವಾ 'ಅಸ್ತಿತ್ವ'ವನ್ನು. ಅಂದರೆ ನಾವು ಆಡುವ ಮಾತಿನ, ನಾವು ತಿಳಿಯುವ ವಿಷಯದ ಹಿಂದೆ ಒಂದು ಸಂಗತಿಯಿದೆ. ಹೀಗೆ ಸಂಗತಿ ಒಂದೆಡೆ; ನಾವು ತಿಳಿಯುವ, ಆಡುವ ಕ್ರಿಯೆ ಒಂದೆಡೆ — ಇದು ಸ್ಪಷ್ಟವಾಯಿತು. ಇಲ್ಲಿ ನಮ್ಮ ಮಾತು ಮತ್ತು ನಮ್ಮ ತಿಳಿವಳಿಕೆ ಆ 'ಇರುವ' ಸಂಗತಿಗೆ ಎಷ್ಟರ ಮಟ್ಟಿಗೆ ನಿಷ್ಠವಾಗಿದೆ? ಎಷ್ಟರ ಮಟ್ಟಿಗೆ ಅದನ್ನರಿತು, 'ಇದ್ದದ್ದನ್ನು ಇದ್ದ ಹಾಗೆ' ಹೇಳುತ್ತೇವೆ? ಇದನ್ನು ಅವಲಂಬಿಸಿ ನಮ್ಮ ವ್ಯಕ್ತಿತ್ವ ರೂಪುಗೊಳ್ಳುವುದು. ನಾವು ಸತ್ಯವನ್ನು ಕಾಣಬಹುದು; ಕಾಣದೆ ಇರಬಹುದು. ಸತ್ಯವನ್ನೇ ನುಡಿಯಬಹುದು; ನುಡಿಯದೆ ಇರಬಹುದು. ಇದರ ನಡುವೆ — ಅಂದರೆ ಅಸ್ಪಷ್ಟವಾಗಿ ತಿಳಿದುಕೊಳ್ಳಬಹುದು; ಅರ್ಧಸತ್ಯವನ್ನು (ಅಂದರೆ 'ಅಡ್ಡಗೋಡೆ ಮೇಲೆ ದೀಪ ಇಟ್ಟ ಹಾಗೆ') ಹೇಳಬಹುದು. ಆದರೆ ಈ ಎಲ್ಲ ವ್ಯತ್ಯಾಸಗಳಿಂದ ನಾವು ಬದಲಾಗುತ್ತೇವೆ; ನಾವು ಸತ್ಯವಂತರೋ ಸುಳ್ಳುಗಾರರೋ, ಮೂಢರೋ ಬುದ್ಧಿವಂತರೋ ಆಗುತ್ತೇವೆ. ಆದರೆ 'ಸತ್ಯ' ಅಥವಾ ಆ 'ಇರುವಿಕೆ' ಹಾಗೇ ಇರುತ್ತದೆ, ಅದು ಬದಲಾಗದು.

ಸತ್ಯ ಎಂದಿಗೂ ಬದಲಾಗದು; ಏಕೆಂದರೆ ಅದು ಬದಲಾಗುವುದಿದ್ದರೆ ಅದನ್ನು 'ಸತ್ಯ' ಎನ್ನಲಾಗದು. ಸತ್ಯಕ್ಕೇ ಸವಾಲನ್ನು ಎಸೆಯುವ ಬುದ್ಧಿವಂತರು ನಮ್ಮ ನಡುವೆ ಇದ್ದಾರೆ. ಅವರ ವಾದ ಹೀಗಿದೆ: 'ಸತ್ಯ ಒಂದು ಎನ್ನಲಾಗದು. ಅದನ್ನು ಎಷ್ಟು ರೀತಿ ಕಾಣುತ್ತೇವೋ ಅಷ್ಟು ರೀತಿಯಲ್ಲಿ ಅದು ಇರಬಲ್ಲುದು.' ಎಂಥ ಚಮತ್ಕಾರದ ವಾದವಾಗಿ ಕಂಡುಬಂದರೂ, ಈ ವಾದದ ಪೊಳ್ಳುತನ ಬಹಳ ಬೇಗನೆ ಬಯಲಾಗುತ್ತದೆ. ಸತ್ಯವೆಂಬುದು ಯಾರೊಬ್ಬರ ಗ್ರಹಿಕೆಯನ್ನೂ, ಅರ್ಥೈಸುವಿಕೆಯನ್ನೂ ಅವಲಂಬಿಸಿಲ್ಲ. ಯಾರೂ ಅರ್ಥೈಸದಿದ್ದರೂ ಅದು ತಾನೇತಾನಾಗಿ ಬೆಳಗುತ್ತಿರುತ್ತದೆ. 'ಯಾವುದೂ ಇಲ್ಲ, ಸತ್ಯವೆಂಬುದೇ ಇಲ್ಲ' ಎಂಬ ಬೌದ್ಧರ ಶೂನ್ಯವಾದವೂ ಅದೇ ರೀತಿ ಅತಾರ್ಕಿಕವಾಗುತ್ತದೆ; ಯಾವುದೂ ಇಲ್ಲವೆಂಬುದನ್ನು ಗ್ರಹಿಸುವ ಒಬ್ಬನಾದರೂ 'ಇರಲೇ'ಬೇಕಲ್ಲವೆ?

ಈ ದೃಷ್ಟಿಯಲ್ಲಿ ಎಲ್ಲ ಅಸ್ತಿತ್ವಕ್ಕೆ ಆಧಾರವಾದ ಭಗವಂತನೇ 'ಸತ್ಯ'; ಅದನ್ನು ಅರಿತುಕೊಳ್ಳುವುದೇ ಸಾಧಕರ ಗುರಿ. ಇನ್ನು ಸಾರ್ವತ್ರಿಕವಾಗಿ, ಆಸ್ತಿಕ-ನಾಸ್ತಿಕರೆಂಬ ಭೇದವಿಲ್ಲದೆ ಎಲ್ಲರಿಗೂ ಅನುಭವಕ್ಕೆ ಬರುವ ಪ್ರಪಂಚ, ಕ್ರಿಯೆ, ಆಗುಹೋಗುಗಳು, ವ್ಯಕ್ತಿ-ವ್ಯಕ್ತಿಗಳ ವ್ಯವಹಾರ ಇವೆಲ್ಲವೂ ಸತ್ಯದ ಕೆಲವು ಮುಖಗಳನ್ನು ಅವಲಂಬಿಸಿರುತ್ತವೆ. ಕಾಲ, ದೇಶ, ಕಾರ್ಯಕಾರಣ ಸಂಬಂಧ, ಮಾನಸಿಕ ಭಾವನೆಗಳು, ಆದರ್ಶ — ಇವೆಲ್ಲವೂ 'ಇರುವು'ದಕ್ಕೆ ಅನುಸಾರವಾಗಿದ್ದರೆ ಮಾತ್ರ ಎಲ್ಲೆಡೆ ಸ್ವೀಕೃತವಾಗುತ್ತದೆ. 'ಇಲ್ಲದ' ವಿಷಯ, ಸುಳ್ಳಿನ ಮೇಲೆ ನಿಂತ ಮಾತುಗಳು, ಸುಳ್ಳನ್ನೇ ಸತ್ಯವಾಗಿಸುವ ಪ್ರಯತ್ನ ಕೇವಲ ತಾತ್ಕಾಲಿಕ. ಇದು ಪ್ರಪಂಚದೆಲ್ಲೆಡೆ ಎಲ್ಲ ಕಾಲಕ್ಕೂ ಮತ್ತೆ ಮತ್ತೆ ಪ್ರಮಾಣಗೊಂಡಿರುವ ಸಂಗತಿ. ತಾರ್ಕಿಕವಾಗಿಯೂ ಇದು ಸತ್ಯ. ಸುಳ್ಳು ತನ್ನ ಟೊಳ್ಳನ್ನು ಎಂದಾದರೂ ಪ್ರಕಟಪಡಿಸಬಹುದಲ್ಲದೆ, ಸತ್ಯವಲ್ಲ. ಏಕೆಂದರೆ ಸತ್ಯ ಟೊಳ್ಳಲ್ಲವೇ ಅಲ್ಲ. ಇದನ್ನೇ ಉಪನಿಷತ್ತು ದೃಢಸ್ವರದಿಂದ, **'ಸತ್ಯಮೇವ ಜಯತೇ'** ಎಂದು ಸಾರುತ್ತದೆ. ಎಲ್ಲಿ ಸತ್ಯಕ್ಕೆ ಅನುಸಾರವಾಗಿ, ಅದಕ್ಕೆ ನಿಷ್ಠರಾಗಿ, ಸತ್ಯವಚನವನ್ನೇ ಆಡುತ್ತ ನಡೆಯುತ್ತಾರೋ ಅಲ್ಲಿ ಎಲ್ಲ ಒಳ್ಳೆಯತನ, ಎಲ್ಲ ಗೆಲುವು, ಎಲ್ಲ ಆನಂದ ನೆಲೆಸಿರುತ್ತವೆ. ಆದ್ದರಿಂದ ಸತ್ಯವೇ ಎಲ್ಲ ಒಳಿತಿಗೆ ಮೂಲ ಎನ್ನಲಾಗಿದೆ.

## ನೈತಿಕತೆ ಮತ್ತು ಸತ್ಯನಿಷ್ಠೆ

ಅನೇಕ ಬಾರಿ ನಾವು ಕೇಳುವ ಮಾತಿದು: ''ಸತ್ಯವೆಂಬುದು ಸತ್ತೇ ಹೋಯಿತು. ಈಗ ಏನಿದ್ದರೂ ದುಷ್ಟರ, ವಂಚಕರ, ಸುಳ್ಳುಗಾರರದೇ ಕಾಲ.'' ಹತಾಶೆಯ, ಸೋಲಿನ ಧ್ವನಿಯಾಗಿ ಕೇಳಿಬರುವ ಈ ಮಾತುಗಳು ಎಷ್ಟರಮಟ್ಟಿಗೆ ವಾಸ್ತವತೆಯನ್ನು ಹೊಂದಿದೆ? ಆಳವಾಗಿ ಚಿಂತಿಸಿ ನೋಡಿದಾಗ ಒಂದು ಅಂಶ ಸ್ಪಷ್ಟವಾಗುತ್ತದೆ. ಜನರು ಎಲ್ಲೆಲ್ಲಿ ಇದ್ದಾರೋ, ಯಾವಾಗಲೆಲ್ಲ ಬದುಕಿದ್ದಾರೋ — ಈ ಎಲ್ಲ ಸಂದರ್ಭಗಳಲ್ಲೂ ಸತ್ಯವಂತರಿದ್ದಂತೆಯೇ ಸುಳ್ಳುಗಾರರೂ ಇರುತ್ತಾರೆ; ಸತ್ಯನಿಷ್ಠರು ಇರುವಂತೆಯೇ ವಂಚಕರೂ ಇರುತ್ತಾರೆ. ವೈಯಕ್ತಿಕ ಹಿತಾಸಕ್ತಿ, ಸ್ವಾರ್ಥ, ಲೋಭಗಳನ್ನು ಸಾಧಿಸಲು ಅವರು ಅಸತ್ಯದ ಮಾರ್ಗ ತುಳಿಯುತ್ತಾರೆ. ಆದರೆ ಈ ಸುಳ್ಳಿನ ಮುಖ ಎಂದಾದರೂ ಹೊರಬರಲೇಬೇಕು; ಒಂದು ವೇಳೆ ಸತ್ಯ ಹೊರಗೆ ಬಾರದೆ ಹೋದರೆ ಅದರಿಂದ ಸಮಾಜಕ್ಕೆ ಮೋಸವಾದೀತು; ಸತ್ಯಕ್ಕೆ ಅದರಿಂದ ಯಾವ ಬಾಧೆ? ಸತ್ಯವನ್ನು ಕಾಪಾಡುವ, ಸುಳ್ಳನ್ನು-ವಂಚನೆಯನ್ನು ಬಯಲಾಗಿಸುವ ಜವಾಬ್ದಾರಿ ಸಮಾಜದ್ದು. ಅದರಿಂದ ಸಮಾಜಕ್ಕೇ ಲಾಭ. ಇಲ್ಲದೆ ಹೋದರೆ ಅಸತ್ಯ , ವಂಚನೆ, ಮೋಸ ತಾಂಡವವಾಡುವುದು. ಅಂಥ ಸಂದರ್ಭ ಬಂದಾಗ ಜನರು ಹತಾಶೆಯಿಂದ 'ಸತ್ಯ ಸತ್ತೇ ಹೋಯಿತು' ಎಂದರೆ, ಅದು ಸೋಲಿನ ಧ್ವನಿಯಾದೀತೇ ಹೊರತು, ಸತ್ಯಕ್ಕಾಗುವ ಬಾಧೆಯಲ್ಲ. ಈ ವ್ಯತ್ಯಾಸವನ್ನು ನಾವು ಸ್ಪಷ್ಟವಾಗಿ ಮನಗಾಣಬೇಕು.

ಸಮಾಜದಲ್ಲಿ ಸತ್ಯಕ್ಕಿರುವ ಬೆಲೆ, ಅದರ ಮೇಲಿರುವ ನಂಬಿಕೆ ಎಂದಿಗೂ ಇದ್ದೇ ಇರುತ್ತದೆ. ಕಾರಣ, ಜೀವನಕ್ಕೆ ಆಧಾರವೇ ನಂಬಿಕೆ; ಈ ನಂಬಿಕೆ ಎಂಬುದು ಆಧರಿಸಿ ನಿಂತಿರುವುದು ಸತ್ಯವನ್ನೇ. ಆದ್ದರಿಂದ ಎಲ್ಲ ನೈತಿಕತೆ, ಮೌಲ್ಯ ಹಾಗೂ ಒಳ್ಳೆಯತನ ನಿಂತಿರುವುದು ಸತ್ಯದ ಮೇಲೆ. ಸತ್ಯ ಹರಿಶ್ಚಂದ್ರನ ಕಥೆ, ಪುಣ್ಯಕೋಟಿಯ ಕಥೆ, ಇನ್ನು ಅನೇಕ ಪೌರಾಣಿಕ-ಸಾಂಪ್ರದಾಯಿಕ ಕಥೆಗಳು ಸತ್ಯಕ್ಕೆ ಅಷ್ಟೊಂದು ಪ್ರಾಮುಖ್ಯತೆ ನೀಡಿರುವುದಕ್ಕೆ ಕಾರಣವಿದು: ಎಲ್ಲ ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಮೌಲ್ಯ-ಆದರ್ಶಗಳು ನಿಂತಿರುವುದು ಸತ್ಯವನ್ನು ಅವಲಂಬಿಸಿಕೊಂಡು. ಆದ್ದರಿಂದ ಎಲ್ಲ ಧಾರ್ಮಿಕ ಗ್ರಂಥಗಳು, ಆಧ್ಯಾತ್ಮಿಕ ಮಹಾಪುರುಷರು, ಸಾಧುಸಂತರು 'ಸತ್ಯವೇ ಎಲ್ಲ ಸಾಧನೆಗೆ ಮೂಲ' ಎಂದು ಏಕರೂಪವಾಗಿ ಸಾರಿ ಹೇಳಿದ್ದಾರೆ.

## ಪ್ರಾಮಾಣಿಕತೆ : ಸತ್ಯದ ಇನ್ನೊಂದು ಮುಖ

ಅನೇಕ ಪೂಜಾ ವಿಧಿಗಳಲ್ಲೂ, ಪ್ರಾರ್ಥನೆ-ಪ್ರತಿಜ್ಞೆ-ವ್ರತಗಳಲ್ಲೂ 'ಕಾಯೇನ ಮನಸಾ ವಾಚಾ' ತಾನು ಹೀಗೆ ಮಾಡುವುದಾಗಿ ಸಂಕಲ್ಪ ಮಾಡುವುದನ್ನು ನೋಡುತ್ತೇವೆ. ಮನಸ್ಸಿನಲ್ಲಿ ಒಂದನ್ನು ಚಿಂತಿಸಿ, ಮಾತಿನಲ್ಲಿ ಇನ್ನೊಂದನ್ನು ಆಡುತ್ತ, ಕ್ರಿಯೆಯ ಮೂಲಕ ಬೇರೆಯೇ ಒಂದನ್ನು ಮಾಡುವವರು ಅಪ್ರಾಮಾಣಿಕರು; ಸತ್ಯಕ್ಕೆ ತಪ್ಪಿ ನಡೆಯುವವರು. ಅವರ ಮಾತು-ಕೃತಿ-ಯೋಚನೆಗಳಲ್ಲಿ ತಾಳಮೇಳ ಇಲ್ಲ ಎನ್ನಬೇಕು. ಆಧ್ಯಾತ್ಮಿಕ ಜಗತ್ತಿನಲ್ಲಿ ಹಾಗಿರಲಿ, ವ್ಯಾವಹಾರಿಕ ಜೀವನದಲ್ಲೂ ಅಂತಹವರಿಗೆ ಹಲವು ಬಗೆಯ ತೊಂದರೆಗಳಾಗುವವು.

ಮೊದಲನೆಯದಾಗಿ, ಅವನು ತನಗೆ ತಾನೇ ಮೋಸ ಮಾಡಿಕೊಳ್ಳುತ್ತಾನೆ. ಯಾವುದೋ ಕ್ಷಣಿಕ ಲಾಭಕ್ಕೆ, ವೈಯಕ್ತಿಕ ಸ್ವಾರ್ಥ ಸಾಧನೆಗೆ ಅವನು ಸುಳ್ಳನ್ನು ಅವಲಂಬಿಸಿದಂತಾಗುತ್ತದೆ. ತಾನು

ಸುಳ್ಳು ನುಡಿದೆ, ವಂಚನೆ ಮಾಡಿದೆ, ಅಪ್ರಾಮಾಣಿಕನಾಗಿದ್ದೇನೆ ಎಂದು ಅವನ ಮನಸ್ಸಿನಲ್ಲಿ ಪಾಪಪ್ರಜ್ಞೆ ಕಾಡಲಾರಂಭಿಸುತ್ತದೆ. ಪರಿಹಾರವಿಲ್ಲದ ವೇದನೆಯಾಗಿ ಅದು ಪರಿಣಮಿಸುವುದು. 'ಸ್ವಲ್ಪವೂ ಆತ್ಮಸಾಕ್ಷಿಯಿಲ್ಲದ ಜನರಿಗೆ ನೋವು ಎಲ್ಲಿಯದು?' ಎಂದು ಕೆಲವರು ಪ್ರಶ್ನಿಸಬಹುದು. ಎಂಥವರಿಗೂ ಆತ್ಮಸಾಕ್ಷಿ ತಲೆಯೆತ್ತಿ ನಿಲ್ಲುವ ಕಾಲ ಒಂದಲ್ಲ ಒಂದು ದಿನ ಬಂದೇ ಬರುವುದು. ಅದು ತಡವಾಗಿ ಬಂದಷ್ಟೂ ಅವರ ಯಾತನೆ ತೀವ್ರವಾಗುವುದು.

ಎರಡನೆಯದಾಗಿ, ಅವರಿಂದ ಇತರರಿಗೆ ಹಾನಿಯಾಗುವುದು; ಅವರ ದುಃಖ ಹಾನಿಗೆ ಕಾರಣವಾದ್ದರಿಂದ ಅದರ ಪರಿಣಾಮ ಈ ವ್ಯಕ್ತಿಯ ಮೇಲಾಗುವುದು. ಅವರೂ ಪ್ರತೀಕಾರ ಮಾಡುವುದಕ್ಕೆ ಅವಕಾಶವಾಗುವುದು; ಹಾಗಾಗಿ ಈ ವ್ಯಕ್ತಿ ಅದನ್ನೆದುರಿಸಬೇಕಾಗುವುದು. ಮೂರನೆಯದಾಗಿ, ಒಟ್ಟು ಸಮಾಜದಲ್ಲೇ ಅಂಥ ವ್ಯಕ್ತಿ ಕುಖ್ಯಾತನಾಗುತ್ತಾನೆ; ಸಮಾಜದಲ್ಲಿ ಒಬ್ಬಂಟಿಯಾಗುತ್ತಾನೆ. ಅಪರಾಧಿಗೆ ಶಿಕ್ಷೆಯ ಭಯ ಸದಾ ಇರುತ್ತದೆ; ಅದೇ ರೀತಿ ಅಪ್ರಾಮಾಣಿಕನಿಗೆ ತನ್ನ ಸುಳ್ಳು ಬಯಲಾಗುವ ಭಯ ಸದಾ ಇರುತ್ತದೆ.

ಇದಕ್ಕೆ ಬದಲಾಗಿ, ಪ್ರಾಮಾಣಿಕನಾಗಿರುವವನು ಮಾತು, ಕೃತಿ ಹಾಗೂ ಆಲೋಚನೆಗಳನ್ನು ಒಂದಾಗಿಸಿರುತ್ತಾನೆ. ಆಲೋಚಿಸಿದ್ದನ್ನೇ ಆಡುತ್ತಾನೆ, ಆಡಿದ್ದನ್ನೇ ಮಾಡುತ್ತಾನೆ. ಇದರಿಂದ ಜನರು ಅವನನ್ನು ನಂಬುತ್ತಾರೆ. ಅವನು ಎಲ್ಲರಿಗೂ ಬೇಕಾದವನಾಗುತ್ತಾನೆ. ಎಲ್ಲರ ಪ್ರೀತಿ, ವಿಶ್ವಾಸ, ಸ್ನೇಹಗಳಿಂದ ಅವನಲ್ಲಿ ಆನಂದ, ಉಲ್ಲಾಸ, ಭರವಸೆ, ಯಾವಾಗಲೂ ಕಂಡುಬರುತ್ತದೆ. ನೈತಿಕ ಸ್ಥೈರ್ಯ, ಮರ್ಯಾದೆ, ಆನಂದಗಳಿಂದ ಅವನ ದೈಹಿಕ-ಮಾನಸಿಕ ಆರೋಗ್ಯವೂ ಉತ್ತಮವಾಗುವುದು. ಆಧ್ಯಾತ್ಮಿಕ ಸಾಧನೆಯಲ್ಲಂತೂ, ಭಗವಂತನನ್ನೇ ಅವಲಂಬಿಸಿ ಬದುಕುವುದು ಅತ್ಯಗತ್ಯ; ಆದ್ದರಿಂದ ಈ ಪ್ರಯಾಣದಲ್ಲಿ ಅಪ್ರಾಮಾಣಿಕತೆಯಷ್ಟು ದೊಡ್ಡ ಶತ್ರು ಬೇರಿಲ್ಲ. ''ಯಾರು ಮನಸ್ಸು, ಮಾತು ಹಾಗೂ ಯೋಚನೆಗಳನ್ನು ಒಂದಾಗಿಸಿರುವನೋ ಅವನೇ ದೇವರಿಗೆ ಹತ್ತಿರದವನು'' ಎನ್ನುತ್ತಾರೆ ಶ್ರೀರಾಮಕೃಷ್ಣರು. ಭಗವದ್ಗೀತೆಯಲ್ಲಿ ಅಪ್ರಾಮಾಣಿಕರನ್ನು 'ಮಿಥ್ಯಾಚಾರಿ'ಯೆನ್ನಲಾಗಿದೆ. ಉಪನಿಷತ್ತುಗಳು ಅಂಥವನನ್ನು 'ಆತ್ಮಘಾತಕ'ನೆಂದೂ, ಅಂಥ ಕ್ರಿಯೆಯನ್ನು 'ಆತ್ಮಹನನ'ವೆಂದೂ ಕರೆಯುತ್ತವೆ.

### ಸತ್ಯ ಮತ್ತು ಸಾಕ್ಷಾತ್ಕಾರ

ಶ್ರೀರಾಮಕೃಷ್ಣರು 'ಕಲಿಯುಗದಲ್ಲಿ ಸತ್ಯವಚನವೇ ತಪಸ್ಸು' ಎನ್ನುತ್ತಾರೆ. ಅಸತ್ಯವೇ ತಾಂಡವವಾಡುತ್ತಿರುವ ಸನ್ನಿವೇಶದಲ್ಲಿ ಒಬ್ಬ ವ್ಯಕ್ತಿ ತನ್ನ ನಂಬಿಕೆಯ ಮೇಲೆ ಸ್ಥಿರವಾಗಿ ನಿಂತು, ಆ ನಂಬಿಕೆಗೆ ಅನುಗುಣವಾಗಿ ಸತ್ಯ, ಪ್ರಾಮಾಣಿಕತೆ, ದೈವಭಕ್ತಿ, ಸೇವೆ, ನಿಸ್ವಾರ್ಥಗಳಿಂದ ಬದುಕುವುದು ಸಾಧ್ಯವಾದರೆ ಅವನಿಗೆ ಅದೆಂತಹ ಧೈರ್ಯ-ಸ್ಥೈರ್ಯಗಳಿರಬೇಡ? ಸತ್ಯಕ್ಕಾಗಿ ಜೀವವನ್ನೂ ಕೊಡಬಲ್ಲವನಿಗಿಂತ ಹೆಚ್ಚಿನ ಧೀರ ಇನ್ನು ಯಾರು? ನಿಜವಾದ ತ್ಯಾಗ, ನಿಜವಾದ ತಪಸ್ಸು-ಸಾಧನೆ ಇರುವುದು ಇಂತಹ ಸತ್ಯನಿಷ್ಠೆಯ ಬದುಕಿನಲ್ಲಿ. ಅಂಥವರು ಸತ್ಯವನ್ನು ಕಾಣಬಲ್ಲರು; ಸತ್ಯದ ಪಥದಲ್ಲಿ ನಡೆಯಬಲ್ಲರು. ಭಗವಂತ ಮತ್ತು ಸತ್ಯ ಬೇರೆಯಲ್ಲ ಎಂಬ ಸತ್ಯವನ್ನು ಯಾರು ಅರಿತುಕೊಳ್ಳುವರೋ ಅವರೇ ಆ ಸತ್ಯದಲ್ಲಿ ಒಂದಾಗಬಯಸುವರು; ಅದಕ್ಕಾಗಿ ಹೋರಾಡುವರು. ಅಂಥ ಹೋರಾಟ ನಡೆಸಿ ಗುರಿ ತಲುಪಿದ ಮಹಾತ್ಮರ ಸಂಖ್ಯೆ ನಮ್ಮ ದೇಶದಲ್ಲಿ ಹೆಚ್ಚಿನದು. ಅವರು ನಡೆದ ಹಾದಿಯೇ ಸತ್ಯದ ಹಾದಿ; ಅವರು ತಲುಪುವ ಗುರಿಯೇ ಸಾಕ್ಷಾತ್ಕಾರ.

ಸತ್ಯವಚನ ಎಂದರೇನು ಎಂಬುದನ್ನು ಕುರಿತು ಒಂದು ಕಥೆಯಿದೆ: ಒಬ್ಬ ದರೋಡೆಕೋರ ಒಬ್ಬ ವ್ಯಕ್ತಿಯೊಬ್ಬನನ್ನು ಅಟ್ಟಿಸಿಕೊಂಡು ಬರುತ್ತಿದ್ದ. ಆ ವ್ಯಕ್ತಿ ಓಡುತ್ತ ಒಬ್ಬ ಸಂನ್ಯಾಸಿಯ ಬಳಿಗೆ ಬಂದ. ಅಲ್ಲೇ ಒಂದು ತಪ್ಪಿಸಿಕೊಳ್ಳಬಹುದಾದ ದಾರಿ ಕಂಡಿತು. ಅಲ್ಲೇ ಓಡಿಹೋದ ಆ ವ್ಯಕ್ತಿ. ಸ್ವಲ್ಪ ಹೊತ್ತಿನಲ್ಲೇ ದರೋಡೆಕೋರ ಅಲ್ಲಿಗೆ ಬಂದ. ಸಂನ್ಯಾಸಿಯನ್ನು ಕಂಡು, ''ಒಬ್ಬ ಓಡುತ್ತ ಬಂದನಲ್ಲ; ಯಾವ ದಿಕ್ಕಿಗೆ ಓಡಿಹೋದ, ಸ್ವಾಮಿ?'' ಎಂದು ಕೇಳಿದ. ತಾನು ನಿಜ ಹೇಳಿಬಿಟ್ಟರೆ ಓಡಿಹೋದ ವ್ಯಕ್ತಿಯ ಜೀವ ಉಳಿಯದು. ಅದಕ್ಕೆ ಆತ ಬೇರೆ ದಾರಿಯತ್ತ ತೋರಿಸಿ, ''ಅಲ್ಲೇ ಓಡಿಹೋದ'' ಎಂದ. ದರೋಡೆಕೋರ ಅಲ್ಲೇ ಓಡಿಹೋದ. ಹೀಗೆ ಆ ಬಡಪಾಯಿಯ ಪ್ರಾಣ ಉಳಿಯಿತು.ಇಲ್ಲಿ ಸಂನ್ಯಾಸಿ ಸುಳ್ಳು ಹೇಳಲಿಲ್ಲವೆ? ಅದು ಸತ್ಯಕ್ಕೆ ಅಪಚಾರ ಎಸಗಿದಂತಲ್ಲವೆ — ಎಂದು ಪ್ರಶ್ನಿಸಬಹುದು. ಈ ಬಗೆಯ ಜಟಿಲವಾದ ಸಂದರ್ಭಗಳು ಒದಗುವುದು ಅತ್ಯಂತ ಅಪರೂಪ. ಆದರೆ ಅಂಥ ಸಂದರ್ಭದಲ್ಲಿ ಮಾತಿನ ಸತ್ಯದಿಂದ ಹಾನಿಯಾಗುವುದಿದ್ದರೆ, ಆಗ ವಿವೇಕವನ್ನು ಉಪಯೋಗಿಸಿ ಅದನ್ನು ಆಡದಿರುವುದೇ ಸೂಕ್ತ. ಇದು ಸಾರುವ ನೀತಿ ಇಷ್ಟೆ: ಮಾತಿನ ಸತ್ಯದಿಂದ ಅನ್ಯಾಯ, ಹಾನಿ ಉಂಟಾಗುವುದಿದ್ದರೆ, ಅಲ್ಲಿ ಸತ್ಯವಚನಕ್ಕಿಂತ ವಿವೇಕ ಹಾಗೂ ಹೃದಯಶೀಲತೆ ಮುಖ್ಯ. ಅದರಿಂದ ಸತ್ಯಕ್ಕೆ ಯಾವುದೇ ಅಪಚಾರವುಂಟಾಗದು. ಇದೇ ಮಹಾತ್ಮರ ಸಂದೇಶ.

### ಅಕ್ಟೋಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೫ | ಶನಿವಾರ | ಮಹಾಸಪ್ತಮಿ |
| ೬ | ಭಾನುವಾರ | ಮಹಾಷ್ಟಮಿ |
| ೭ | ಸೋಮವಾರ | ಮಹಾನವಮಿ |
| ೮ | ಮಂಗಳವಾರ | ವಿಜಯದಶಮಿ |
| | | ಶ್ರೀಮಧ್ವ ಜಯಂತಿ |
| ೯ | ಬುಧವಾರ | ಏಕಾದಶಿ |
| ೨೪ | ಗುರುವಾರ | ಏಕಾದಶಿ |
| ೨೭ | ಭಾನುವಾರ | ಕಾಳೀಪೂಜೆ |